2) ಮುಗಿದಿರುವ ಕಾಮಗಾರಿಗಳ ಗುಣಮಟ್ಟ ಹೇಗಿದೆ?

3) ಉಳಿದ ಕಾಮಗಾರಿಗಳು ಪೂರ್ಣಗೊಳ್ಳಲಿಕ್ಕೆ ಬೇಕಾಗುವ ಕಾಲಾವಧಿ ಎಷ್ಟು?

4) ಈ ಕಾಮಗಾರಿಗಳಿಗೆ ಖರ್ಚಾಗಿರುವ ಹಣ ಎಷ್ಟು?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

1. ಮೈಸೂರು ನಗರದಲ್ಲಿ ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ ಯೋಜನೆಯಡಿ ಕಸಕಡ್ಡಿ ವಿಲೇವಾರಿಗೆ ಕಸದ ತೊಟ್ಟಿಗಳನ್ನು ನಿರ್ಮಿಸುವ ಕಾಮಗಾರಿಯು ಮುಗಿದಿದೆ. ಇದಲ್ಲದೆ, ಕಸಕಡ್ಡಿಯ ಸಾಗಿಸುವಿಕೆಗೆ ಬೇಕಾದ ವಾಹನಗಳನ್ನು ಖರೀದಿಸಲಾಗಿದೆ. ಉಳಿದ 24 ಕಾಮಗಾರಿಗಳು ಪ್ರಗತಿಯಲ್ಲಿದೆ.

2. ಈಗ ನಡೆಯುತ್ತಿರುವ ಕಾಮಗಾರಿಗಳಲ್ಲಿ ಬಹುತೇಕ ಕಾಮಗಾರಿಗಳು ನಿರ್ದಿಷ್ಟ ಗುಣಮಟ್ಟಕ್ಕನುಗುಣವಾಗಿ ನಡೆಯುತ್ತಿದೆ. ಆದರೆ ಕೆಲವೊಂದು ಕಾಮಗಾರಿಗಳಲ್ಲಿ ರಸ್ತೆ ನಿರ್ಮಾಣಗಳಲ್ಲಿ ನಿರ್ದಿಷ್ಟ ಗುಣಮಟ್ಟವನ್ನು ಕಾಯ್ದುಕೊಂಡಿಲ್ಲವೆಂದು ತಿಳಿದುಬಂದಿದೆ.

3. ಸುಮಾರು 17 ಕಾಮಗಾರಿಗಳು 2000 ನೇ ವರ್ಷದ ಅಂತ್ಯಕ್ಕೆ ಮುಗಿಯುವ ಸಂಭವವಿದೆ ಮತ್ತು ಉಳಿದ 7 ಕಾಮಗಾರಿಗಳು 2001ನೇ ಇಸವಿಯ ಕೊನೆಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

4. ಈವರೆಗಿನ ವೆಚ್ಚ ಸುಮಾರು ರೂ. 29.5 ಕೋಟಿಗಳು.

ಬೀದರ್ ಜಿಲ್ಲೆಯ ಪುರಸಭೆ ಕಟ್ಟಡ

434 - ಶ್ರೀ ಸಭಾಶ್ ಕಲ್ಲೂರ್ (ಹುಮ್ನಾಬಾದ್) : ಮಾನ್ಯ ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಹಮ್ನಾಬಾದ್‌ನಲ್ಲಿ ಪುರಸಭೆ ಕಟ್ಟಡ ಮಂಜೂರಾಗಿರುವುದು ಎಂದು, ಇದಕ್ಕಾಗಿ ಒದಗಿಸಲಾದ ಹಣವೆಷ್ಟು?

ಆ) ಈವರೆಗೂ ಕಟ್ಟಡದ ನಿರ್ಮಾಣ ಕಾರ್ಯ ಪ್ರಾರಂಭವಾಗದಿರಲಿಕ್ಕೆ ಕಾರಣಗಳೇನು?

ಇ) ಕಟ್ಟಡದ ಕಾರ್ಯ ಪ್ರಾರಂಭಿಸಲಿಕ್ಕೆ ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ನಗರಾಭಿವೃದ್ಧಿ ರಾಜ್ಯ ಸಚಿವರು) :

ಅ) ಜಿಲ್ಲಾಧಿಕಾರಿ, ಬೀದರ್‌ರವರು ದಿನಾಂಕ 8.7.99 ರಂದು ಪುರಸಭೆ ಕಟ್ಟಡ ಕಟ್ಟಲು ಮಂಜೂರಾತಿ ಆದೇಶ ಹೊರಡಿಸಿದ್ದು, ರೂ. 15-00 ಲಕ್ಷ ಹಣವನ್ನು ಈ ಉದ್ದೇಶಕ್ಕಾಗಿ ಹತ್ತನೇ ಹಣಕಾಸು ಯೋಜನೆಯಡಿಯಲ್ಲಿ ಅನುದಾನವನ್ನಾಗಿ ಒದಗಿಸಲಾಗಿದೆ.

ಆ) ಕಟ್ಟಡ ನಿರ್ಮಾಣದ ಕಾಮಗಾರಿಗಳನ್ನು ಭೂಸೇನಾ ನಿಗಮಕ್ಕೆ ವಹಿಸಿದ್ದು ಅವುಗಳು ಫೆಬ್ರವರಿ 2000 ರಲ್ಲಿ ಪ್ರಾರಂಭವಾಗಿರುತ್ತವೆ.

ಇ) ಉದ್ಭವಿಸುವುದಿಲ್ಲ.

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣಕ್ಕೆ ನಿಗಧಪಡಿಸಿದ ಮೊತ್ತ

435 - ಶ್ರೀ ಸದಾನಂದಗೌಡ ಡಿ.ವಿ. (ಪುತ್ತೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1999-2000ರ ಸಾಲಿನಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣಕ್ಕೆ ಬಜೆಟಿನಲ್ಲಿ ನಿಗಧಿಪಡಿಸಿರುವ ಮೊತ್ತವೆಷ್ಟು?*

ಆ) *1999-2000ರ ಸಾಲಿನಲ್ಲಿ ಬಿಡುಗಡೆಗೊಳಿಸಿದ ಮೊತ್ತವೆಷ್ಟು?*

ಇ) *ಅನುದಾನದ ಕೊರತೆಯನ್ನು ಹೊಂದಿಸುವ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ?*

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ***ಹಿಂದುಳಿದ ವರ್ಗಗಳ ಇಲಾಖೆ***

1999-2000ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಇಲಾಖೆಯ ಕಾರ್ಯಕ್ರಮಗಳಿಗೆ ಆಯವ್ಯಯದಲ್ಲಿ ರೂ. 8640.71 ಲಕ್ಷಗಳನ್ನು ಒದಗಿಸಲಾಗಿದೆ.

ಅಲ್ಪಸಂಖ್ಯಾತರ ಇಲಾಖೆ

ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ 1999-2000ನೇ ಸಾಲಿನಲ್ಲಿ ಒಟ್ಟು ರೂ. 242.25 ಲಕ್ಷಗಳನ್ನು, ನಿಗಧಿ ಪಡಿಸಲಾಗಿದೆ.

ಆ) ***ಹಿಂದುಳಿದ ವರ್ಗಗಳ ಇಲಾಖೆ***

1999-2000ನೇ ಸಾಲಿನಲ್ಲಿ ರೂ. 6266.62 ಲಕ್ಷ ಹಣ ಬಿಡುಗಡೆಯಾಗಿರುತ್ತದೆ.

ಅಲ್ಪಸಂಖ್ಯಾತರ ಇಲಾಖೆ

1999-2000ನೇ ಸಾಲಿನಲ್ಲಿ ರೂ. 107 ಲಕ್ಷ ಮೊತ್ತ ಬಿಡುಗಡೆ ಮಾಡಲಾಗಿದೆ.

ಇ) ***ಹಿಂದುಳಿದ ವರ್ಗಗಳ ಇಲಾಖೆ***

ಸರ್ಕಾರದ ಪರಿಶೀಲನೆಯಲ್ಲಿದೆ.

ಅಲ್ಪಸಂಖ್ಯಾತರ ಇಲಾಖೆ

ಖಾಸಗಿ ವಿದ್ಯಾರ್ಥಿನಿಲಯಗಳಿಗೆ ನೀಡುವ ಅನುದಾನದ ಲೆಕ್ಕ ಶೀರ್ಷಿಕೆಯಲ್ಲಿ ರೂ.